ಶಾಂತವೀರ ತೀರಿಕೊಂಡಿದ್ದನ್ನು ಕೇಳಿ ತುಂಬಾ ಸಂಕಟ ಆಯ್ತು. ಇತ್ತೀಚೆಗೆ ನನಗೆ ಅವನ ಸಂಪರ್ಕಾನೇ ಇರಲಿಲ್ಲ.

'ಭಾರೀ ದೊಡ್ಡ ಮನುಷ್ಯ ಕಣಯ್ಯ ಶಾಂತವೀರ. ಅದೆಷ್ಟು ರಕ್ತ ಬಸಿದಿದ್ದಾನೋ ಈ ಹೋರಾಟಗಳಿಗೆ. ಯಾವುದಾದರೂ ಮೆರವಣಿಗೆಗೋ ರ್‍ಯಾಲಿಗೋ ನಾನು ಹಣ ಹೊಂದಿಸೋಕಾಗದೆ ಪೇಚಾಡ್ತಿದ್ದರೆ ಅವನು ಸದ್ದಿಲ್ಲದೆ ಎಲ್ಲ ವ್ಯವಸ್ಥೆಯನ್ನೂ ಮಾಡಿ, 'ಏ ನಾಯಕ. ನೀನು ನಾಯಕನಂಗೇ ಇರ್ಬೇಕು ಕಣಲೇ' ಅಂತಿದ್ದ. ಅವತ್ತು ಮೈಸೂರು ರಸ್ತೇಲಿ ಜಾಥಾ ಮಾಡಿದೆವಲ್ಲ. ಅದೆಲ್ಲ ಅವನದೇ ಶ್ರಮ. ಅವಾಗ ನೀವೆಲ್ಲ ಬಿಸಿರಕ್ತದ ಹುಡುಗರು. ಆ ಮೈಸೂರು ರಸ್ತೆ ಜಾಥಾಕ್ಕೆ ನಿಮ್ಮನ್ನೆಲ್ಲ ಯಾಕೆ ಕರ್ಕೊಂಡು ಹೋಗಿದ್ದೆ ಅನ್ನೋದು ನಿಮಗ್ಯಾರಿಗೂ ಗೊತ್ತಿರ್ಲಿಲ್ಲ ಅಲ್ವಾ? ಪಾಪ ನಿಮ್ಮನ್ನು ಕೂಡ ಪೊಲೀಸರು ಹೊಡೆದರೂಂತ ಕಾಣ್ತದೆ. ನಿನಗೂ ಅವೊತ್ತು ಪೆಟ್ಟಾಯ್ತೇನಯ್ಯಾ?' ಎಂದು ಕಕ್ಕುಲಾತಿಯಿಂದ ಕೇಳಿದೆ.

'ಹೋಗ್ಲಿ ಬಿಡು. ಅವತ್ತು ನಿಮಗೆಲ್ಲ ಏನು ತೊಂದರೆ ಆಯ್ತೋ ಅಂತ ಆತಂಕ ಪಟ್ಟಿದ್ದೆ' ಅಂದೆ.

'ಆದರೆ ಅವತ್ತು ನಿಮಗೇನಾಯ್ತು ಅನ್ನೋದನ್ನೂ ನೋಡದೇನೆ ನಾವು ಬಂದು ಬಿಟ್ಟೆವಲ್ಲ. ಅದು ನೆನಪಾದ್ರೆ ಈಗಲೂ ನಾಚ್ಕೆ ಆಗ್ತದಣ್ಣ' ಅಫ್ಜಲ್ ಪಶ್ಚಾತ್ತಾಪ ಪಟ್ಟ.

'ಆಯ್ತು ಬಿಡಯ್ಯಾ ಅಫ್ಜಲ್. ಅದ್ರಲ್ಲಿ ನಿಮ್ಮದೇನೂ ತಪ್ಪಿಲ್ಲ. ಯಾಕೇಂದ್ರೆ ನಿಮ್ಮನ್ನ ಜೊತೇಲಿ ಕರ್ಕೊಂಡು ಹೋಗೋವಾಗ ಯಾಕೆ ಹೋಗ್ತಿದ್ದೀವಿ. ಅದರಿಂದೇನಾಗುತ್ತೆ ಅನ್ನೋದನ್ನ ನಾನು ನಿಮಗೆ ಹೇಳ್ಬೇಕಾಗಿತ್ತು. ಹೋರಾಟದ ಉದ್ದೇಶ ಏನು ಅದರ ಪರಿಣಾಮ ಏನು ಅನ್ನೋದು ದಂಡನಾಯಕನಿಗೆ ಮಾತ್ರ ಗೊತ್ತಿದ್ರೆ ಸಾಲದಲ್ವಾ? ಅವನಿಗಷ್ಟೇ ಗೊತ್ತಿದ್ರೆ ಏನಾಗ್ತದೆ ಹೇಳು? ಮುಂದಿರೋ ಅವನು ಕೆಳಗೆ ಬಿದ್ದಾಂದ್ರೆ ಹಿಂದಿರೋ ಸೈನಿಕರೆಲ್ಲ ದಿಕ್ಕಾಪಾಲಾಗ್ತಾರೆ. ಹೋರಾಟದ ಉದ್ದೇಶಾನ ಅವನು ಎಲ್ಲರಿಗೂ ಅರ್ಥ ಮಾಡಿಸಿರ್ಬೇಕು. ಹಾಗೇನೆ ಹಠಾತ್ತಾಗಿ ಬರೋ ಹಿನ್ನಡೇನ ಎದುರಿಸೋದು ಹ್ಯಾಗೆ ಅಂತಾನೂ ಅವರಿಗೆ ಕಲಿಸಿರ್ಬೇಕು. ನಾನು ನಿಮಗೆ ಯಾವುದನ್ನೂ ಸರಿಯಾಗಿ ಹೇಳಿರ್ಲಿಲ್ಲ. ಸರಿಯಾಗಿ ಕಲಿಸಿರ್ಲಿಲ್ಲ. ನನ್ನ ಹಿಂದೆ ಹುಂಬ ಧೈರ್ಯದ ಹುಡುಗರಿದ್ರೆ ಅಷ್ಟೇ ಸಾಕೂಂತ ಯೋಚಿಸ್ದೆ. ಆದ್ರೂ ಆ ಪೊಲೀಸ್ರು ಅವತ್ತು ಅದ್ಯಾಕಷ್ಟು ಕ್ರೂರವಾಗಿ ಆಡಿದ್ರೋ ಗೊತ್ತಿಲ್ಲ. ಯಾವುದೋ ಜನ್ಮದ ಸೇಡು ತೀರಿಸ್ಕೊಳ್ಳೋರ ಥರಾ ಹೊಡುದ್ರು ಕಣಪ್ಪ. ಇರ್ಲಿ ಬಿಡು, ಪಾಪ ಅವರ ಅನಿವಾರ್ಯತೆ ಏನಿರ್ತದೋ ಏನೋ. ಅವರ ಕರ್ತವ್ಯ ಅವರು ಮಾಡಿರ್ತಾರೆ. ಆದರೆ ನಾನು ಆಸ್ಪತ್ರೇಲಿ ಎರಡು ತಿಂಗಳಿರಬೇಕಾಯ್ತು ಕಣಯ್ಯಾ' — ಎನ್ನುವಾಗ ಆ ನೆನಪಿನಿಂದಲೇ ನನ್ನ ಬೆನ್ನಹುರಿಯಲ್ಲಿ ನೋವು ಹರಿದಿತ್ತು.

'ಅಣ್ಣ ನಿಮ್ಮ ಕಾಲಿಗೇನಾಯ್ತು?' ಅಂದ ಅಫ್ಜಲ್. ನಾನೇನೂ ಉತ್ತರಿಸಲಿಲ್ಲ.

'ಯಾಕಣ್ಣ? ಹೇಳಲಿಕ್ಕೆ ಇಷ್ಟ ಇಲ್ವಾ?' ಅಂದ ಅಫ್ಜಲ್.

'ಹಾಗೇನಿಲ್ಲ ಕಣಯ್ಯ ಅಫ್ಜಲ್. ಅಪ್ಪ ತೀರಿಕೊಂಡನಲ್ಲ. ಆಗ ನನ್ನ ಆತ್ಮವಿಶ್ವಾಸಾನೇ ಉಡುಗೋಯ್ತು. ಅದಾದ ಐದು ವರ್ಷಕ್ಕೆ ಸುಮಿತ್ರಾನೂ ಹೋಗಿಬಿಟ್ಳು. ನಾನು ಇನ್ನಷ್ಟು ಕಂಗೆಟ್ಟುಬಿಟ್ಟೆ. ನನ್ನಿಬ್ಬರು ಮಕ್ಕಳು ತಬ್ಬಲಿಗಳಾಗಿಬಿಟ್ರು ಅಂದ್ಕೊಂಡೆ. ಆಗ ಬರೀ ಒಂಬತ್ತು ವರ್ಷ ನನ್ನ ಮಗಳು ಚೆನ್ನಮ್ಮನಿಗೆ. ಆ ಹೆಸರೇ ಅವಳಿಗೆ ಆ ಶಕ್ತಿ ಕೊಟ್ಟಿತ್ತೇನೊ ಗೊತ್ತಿಲ್ಲ. ಎಳೆಯ ತಮ್ಮನನ್ನ ಬೆನ್ನಿಗೆ ಹಾಕ್ಕೊಂಡು ಸಾಕೋದಕ್ಕೆ ಶುರು ಮಾಡಿದ್ಲು. ಆ ಪುಟ್ಟ ಜೀವಕ್ಕೇ